**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ- ಶ್ರೀ ಸಿ ಟಿ ಪಿ ವಕೀಲರಿಂದ ವಾದಿಯ ಪರವಾಗಿ.</u>**

21. ನಿಡಿ-1 ಪಾಲುವಿಭಾಗ ಪತ್ರ ದಾವಾಸ್ವತ್ತಿಗೆ ಸಂಬಂಧಪಟ್ಟ ದಾಖಲೆಯಲ್ಲ. ನಿಡಿ-4 ಎಂ.ಆರ್. ದಾಖಲೆ ದಾವಾಸ್ವತ್ತಿಗೆ ಸಂಬಂಧಪಟ್ಟ ದಾಖಲೆಯಲ್ಲ. ನಿಡಿ-5 ಕ್ರಯ ಪತ್ರ ದಾವಾಸ್ವತ್ತಿಗೆ ದಾಖಲೆಯಲ್ಲ. ದಾವಾ ಸರ್ವೇನಂ.54/1 ಪಿ2 ಇದಕ್ಕೆ ಸಂಬಂಧಪಟ್ಟಂತೆ ಯಾವ ದಾಖಲೆಗಳನ್ನು ಸಲ್ಲಿಸಿದ್ದೀರಾ ಎಂದರೆ ವಿಲ್ ಪತ್ರ ಹಾಜರು ಪಡಿಸಿರುತ್ತೇನೆ. ಸದರಿ ಸರ್ವೇ ನಂ.ಗೆ ಸಂಬಂಧಪಟ್ಟಂತೆ ವಿಲ್ ಪತ್ರ ಹೊರೆತುಪಡಿಸಿದರೆ ಬೇರೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ರಿ.ಸರ್ವೇ ನಂ. 32/1 ಪಿ ಇದಕ್ಕೆ ಸಂಬಂಧಪಟ್ಟ ಯಾವ ದಾಖಲೆಗಳನ್ನು ಸಲ್ಲಿಸಿದ್ದೀರಾ ಎಂದರೆ ವಿಲ್ ಪತ್ರ ಹಾಜರು ಪಡಿಸಿರುತ್ತೇನೆ. ವಿಲ್ ಪತ್ರ ಹೊರೆತುಪಡಿಸಿದರೆ ಈಗ ಹೇಳಿದ ಸರ್ವೇ ನಂ. ಆಸ್ತಿಗೆ ಬೇರೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾಸ್ವತ್ತುಗಳಿಗೆ ಸಂಬಂಧಿಸಿ ದಂತೆ ವಿಲ್ ಪತ್ರ ಹೊರೆತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಪಹಣಿ ಹಾಜರು ಪಡಿಸಿರುತ್ತೇನೆ. ಪಹಣಿಗಳನ್ನು ಸರ್ವೇ ನಂ. 54 ಹಾಗೂ 32 ಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪಹಣಿಗಳನ್ನು ಹೊರೆತುಪಡಿಸಿ ಮೂಲ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಆಸ್ತಿಗೆ ಸಂಬಂಧಪಟ್ಟಂತೆ ಪಹಣಿಗಳನ್ನು ಹಾಜರು ಪಡಿಸಿರುತ್ತೇನೆ.

22. ನಾನು ಹಾಜರು ಪಡಿಸಿರುವ ಪಹಣಿಗಳು 2013 ನೇ ಸಾಲಿನಿಂದ 2018 ರವರೆಗೆ ಹಾಜರು ಪಡಿಸಿರುತ್ತೇನೆ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಸದರಿ ಪಹಣಿಗಳು ಲಭ್ಯ ಇದೆಯಾ ಎಂದರೆ ಸಾಕ್ಷಿಯು ಪಹಣಿಗಳು ಇವೇ ಎಂದು ನುಡಿಯುತ್ತಾರೆ. ಅಂತಹ ಪಹಣಿಗಳನ್ನು ಹಾಜರುಪಡಿಸದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಪಾಲುವಿಭಾಗದಲ್ಲಿ ನನ್ನ ತಂದೆಯಿಂದ ಬಂದಂತಹ ಆಸ್ತಿಗಳನ್ನು ಕಂದಾಯವನ್ನು ಪಾವತಿ ಮಾಡುತ್ತಿದ್ದೇನೆ. ನಾನು ಹೇಳುತ್ತಿರುವ ಪಾಲುವಿಭಾಗ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಕಾರಣ 16-17 ವಯಸಿನವನು ಇದ್ದಾಗ ಪಾಲುವಿಭಾಗ ಆಗಿರುತ್ತದೆ. ಹಾಗಾಗಿ ನನಗೆ ಸದರಿ ಪಾಲುವಿಭಾಗ ಪತ್ರದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ.

23. ಯಾವ ವ್ಯಕ್ತಿಗಳು ದಾವಾಆಸ್ತಿಯ ಹಕ್ಕು ಸ್ವಾಧೀನ ಹೊಂದಿದವರು ಮಾತ್ರ ಕಂದಾಯ ಪಾವತಿ ಮಾಡಲು ಸಾಧ್ಯ ಎಂದರೆ ಸರಿ. ಯಾರು ಆಸ್ತಿ ಸ್ವಾಧೀನ ಅನುಭವ ಹೊಂದಿರುತ್ತಾರೋ ಅವರನ್ನು ಬಿಟ್ಟು ಬೇರೆಯವರು ಕಂದಾಯ ಮಾಡಲು ಸಾಧ್ಯಯಿಲ್ಲ ಎಂದರೆ ಸಾಕ್ಷಿಯು ಸ್ವಾಧೀನದಲ್ಲಿ ಇಲ್ಲದಿದ್ದರೆ ಕಂದಾಯ ಕಟ್ಟಲು ಬರುವುದಿಲ್ಲ ಎಂದು ನುಡಿಯುತ್ತಾರೆ.

24. ದಾವಾಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕಂದಾಯ ಪಾವತಿ ಮಾಡಿರುವ ದಾಖಲೆಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಆದರೆ 2018 ಕ್ಕಿಂತ ಹಿಂದೆ ಕಂದಾಯವನುನ ಕಟ್ಟಿಸಿಕೊಳ್ಳುತ್ತಿದ್ದರು. 2018 ಕ್ಕೆ ಹಿಂದೆ ನಾನು ಕಂದಾಯವನ್ನು ಪಾವತಿ ಮಾಡಿರುತ್ತೇನೆ. ಆ ದಾಖಲೆಗಳನ್ನು ಸಲ್ಲಿಸಿಲ್ಲ ಕಾರಣ ಕೇಳಿಲ್ಲ. ನಾನು ಕಂದಾಯವನ್ನು ಪಾವತಿ ಮಾಡದೇ ಇರುವ ಕಾರಣ ದಾಖಲೆಗಳನ್ನು ಹಾಜರು ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25. ನಿಪಿ-16 ರಿಂದ 18 ರವರೆಗಿನ ಕಂದಾಯ ದಾಖಲೆ ವಾದಿಗಳು ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯ ಕಟ್ಟಿರುವ ದಾಖಲೆಗಳು ಎಂದರೆ ಸಾಕ್ಷಿಯು ನಾನು ಸಹ ಕಂದಾಯವನ್ನು ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

26. ನನ್ನ ಹಿಂದಿನ ಪಾಟೀ ಸವಾಲು ಪುಟ 9 ರಲ್ಲಿ ಮೊದಲನೇ ಸಾಲಿನ ನಿಡಿ-1 ಯನ್ನು ತಯಾರಿಸುವಾಗ ನಾನು ನನ್ನ ತಂದೆಯ ಜೊತೆಗೆ ದಿಃ01.04.1981 ರಂದು ಹೋಗಿದೆ ಎಂದು ಹೇಳಿದ್ದು, ಆ ದಿನಾಂಕದಲ್ಲಿ ತಯಾರು ಆಗಿದರೆಯೇ ಅಥವಾ ಬೇರೆ ದಿನಾಂಕದಲ್ಲಿ ತಯಾರು ಆಗಿದೆಯೇ ಎಂದರೆ ಸಾಕ್ಷಿಯು ದಿಃ01.04.1991 ರಂದು ವಿಲ್ ಪತ್ರವು ತಯಾರು ಆಗಿದೆ ಎಂದು ನುಡಿಯುತ್ತಾರೆ. ಹಾಗಾದರೆ ದಿಃ01.04.1981 ರಲ್ಲಿ ನೀವು ಯಾತಾಕ್ಕಾಗಿ ಹೋಗಿದ್ದು ಎಂದರೆ ಸಾಕ್ಷಿಯು ದಿಃ01.04.1991 ರಂದು ವಿಲ್ ಪತ್ರ ತಯಾರು ಆಗಿರುವುದು ಎಂದು ನುಡಿಯುತ್ತಾರೆ. ದಿಃ01.04.1991 ರಂದು ವಿಲ್ ಪತ್ರ ತಯಾರು ಆಗುವಾಗ ನಾನು ಒಳಗಡೆ ಇರಲಿಲ್ಲ ಆದರೆ ಹೊರಗಡೆ ಇದ್ದೇ ಎಂದು ನುಡಿದು ಸಾಕ್ಷಿಯು ನಾನು ಚಿಕ್ಕ ಹುಡುಗ ಅಜ್ಜಿಯನ್ನು ಕರೆದುಕೊಂಡು ಬಂದಿದ್ದೆ, ಅಜ್ಜಿ ಒಳಗೆ ಇದ್ದರು ಎಂದು ನುಡಿಯುತ್ತಾರೆ. ನಾನು ಹೊರಗಡೆ ಇದ್ದ ಕಾರಣ ಒಳಗೆ ಏನು ನಡೆಯಿತು ಎನ್ನುವ ಮಾಹಿತಿ ನನಗೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ನೋಂದಣಿ ಕಚೇರಿಯ ಹೊರಗಡೆ ಇದೆ. ನನ್ನ ಎದುರಿಗೆ ವಿಲ್ ಪತ್ರ ತಯಾರು ಆಗಿಲ್ಲ ಕಾರಣ ನಾನು ಚಿಕ್ಕ ಹುಡುಗ ಇದ್ದೆ ನನ್ನನ್ನು ಒಳಗೆ ಬಿಟ್ಟು ಕೊಂಡಿರಲಿಲ್ಲ. 1991 ರಲ್ಲಿ ನನಗೆ ವಯಸ್ಸು 17-18 ವರ್ಷ ಇತ್ತು.

27. ನನ್ನ ಹುಟ್ಟಿದ ದಿನಾಂಕ ಗೊತ್ತಿಲ್ಲ. ಈಗ ನನಗೆ ವಯಸ್ಸು 56-57 ಆಗಿದೆ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 28 ವರ್ಷ ಎಂದು ತೋರಿಸಿರುತ್ತೇನೆ ಎಂದರೆ ಸಾಕ್ಷಿಯು 5-6 ತಿಂಗಳು ವ್ಯತ್ಯಾಸ ಇರಬಹುದು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತೋರಿಸಿರುವ ವಯಸ್ಸನ್ನು ಗಣನೆಗೆ ತೆಗೆದುಕೊಂಡರೆ 1991 ರಲ್ಲಿ ನನಗೆ ಸಮಾರು 18-19 ವರ್ಷ ಎಂದರೆ ಸರಿ. ಆ ಸಮಯಕ್ಕೆ ನನಗೆ ಪ್ರಪಂಚದ ಜ್ಞಾನ ಇತ್ತು ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ನಾನು ಹೊರಗಡೆ ಇದ್ದೆ ಎಂದು ಹೇಳುತ್ತಿದ್ದ ಕಾರಣ ನಿಡಿ-2 ನ್ನು ಯಾರು ತಯಾರು ಮಾಡಿದರು, ಯಾರು ಮೊದಲು ಸಹಿ ಮಾಡಿದರು, ನಂತರ ಮೂಕಮ್ಮ ಯಾವಾಗ ಸಹಿ ಅಥವಾ ಹೆಬ್ಬೆಟ್ಟು ಗುರುತು ಹಾಕಿದರು ಎನ್ನುವುದು ಗೊತ್ತಿಲ್ಲ ಎಂದರೆ ಸಾಕ್ಷಿಯು ಗೊತ್ತಿದೆ ಎಂದು ನುಡಿಯುತ್ತಾರೆ. ನನಗೆ ವಿಲ್ ಪತ್ರವನ್ನು ಓದಿದ ಮೇಲೆ ಅದರಲ್ಲಿ ಇರುವ ವಿಚಾರ ತಿಳಿದು ಬಂದಿದ್ದು ಎಂದರೆ ಸರಿ. ನಾನು ನಿಡಿ-2 ದಾಖಲೆಯನ್ನು ಮೊಟ್ಟಮೊದಲಿಗೆ ಎಲ್ಲಿ, ಯಾವಾಗ ನೋಡಿದ್ದು ಎಂದರೆ ಸಾಕ್ಷಿಯು ಈಗ 2-3 ವರ್ಷಗಳ ಹಿಂದೆ ನೋಡಿರುವುದು ಎಂದು ನುಡಿಯುತ್ತಾರೆ. ಅದಕ್ಕಿಂತ ಮುಂಚೆ ನೋಡಿಲ್ಲವೇ ಎಂದರೆ ಸಾಕ್ಷಿಯು ಮನೆಯಲ್ಲಿ ಇತ್ತು ನೋಡಿದ್ದೇನೆ, ನ್ಯಾಯಾಲಯದಲ್ಲಿ ದಾವೇ ಸಲ್ಲಿಸಿದ ಮೇಲೆ ವಿಲ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ 2-3 ವರ್ಷಗಳು ಆಗಿದೆ.

28. 2-3 ವರ್ಷಗಳ ಹಿಂದೆ ಮಾತ್ರ ವಿಲ್ ಪತ್ರದಲ್ಲಿ ಇರುವ ವಿಚಾರಗಳನ್ನು ತಿಳಿದುಕೊಂಡಿರುವುದು ಎಂದರೆ ಸಾಕ್ಷಿಯು 1991 ರಲ್ಲಿ ಓದಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ವಿಲ್ ಪತ್ರ ನಮ್ಮ ಮನೆಯಲ್ಲಿ ಇತ್ತು, ನಮ್ಮ ತಂದೆಯ ಬಳಿ ಇತ್ತು.

29. ನಾಗಮ್ಮ ಅಲಿಯಾಸ್ ಮೂಕಮ್ಮ ಈಕೆ ಮೂಕ ವ್ಯಕ್ತಿ ಆದ ಕಾರಣ ಕ್ರಯ ಪತ್ರವಾಗಲಿ, ದಾನ ಪತ್ರವಾಗಲಿ ಅಥವಾ ವಿಲ್ ಪತ್ರ ಮಾಡುವ ಸಮಯದಲ್ಲಿ ಕೆಲವು ಪ್ರಕ್ರಿಯೇಗಳನ್ನು ವಿಶೇಷವಾಗಿ ಅನುಸರಿಸಿ ಅಂತಹ ಪತ್ರಗಳನ್ನು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಆಕೆಗೆ ಸಂಪೂರ್ಣವಾಗಿ ಕಿವಿ ಕೇಳುತ್ತಿತ್ತು ಮತ್ತು ಹೇಳಿದ ಕೆಲಸ ಎಂದರೆ ಊಟ ಮಾಡು ಎಂದರೆ, ಹೊಲಕ್ಕೆ ಹೋಗು ಎಂದರೆ, ಅಡುಗೆ ಮಾಡು ಎಂದರೆ ಆಕೆ ಮಾಡುತ್ತಿದ್ದಳು, ಆ ರೀತಿ ಆಕೆಗೆ ಸಂಪೂರ್ಣವಾಗಿ ಕಿವಿ ಕೇಳಿಸುತ್ತಿತ್ತು. ಸದರಿ ವಿಶೇಷ ಪ್ರಕ್ರಿಯೇ ಬಗ್ಗೆ ಗೊತ್ತಿತ್ತೇ ಎಂದರೆ ಗೊತ್ತಿತ್ತು ಎಂದು ನುಡಿಯುತ್ತಾರೆ. ನಿಡಿ-2 ಅಂತಹ ವಿಶೇಷ ಪ್ರಕ್ರಿಯೇಯನ್ನು ಅನುಸರಿಸಿ ನಡೆಯದ ದಾಖಲೆಯಾಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಚಲನ ವಲನಗಳು ಆಕೆಗೆ ಗೊತ್ತಿತ್ತು ಎಂದು ನುಡಿಯುತ್ತಾರೆ.

30. ನಾಗಮ್ಮ ಅಲಿಯಾಸ್ ಮೂಕಮ್ಮ ನಿಗೆ ಆಕೆ ಮೂಕ ವ್ಯಕ್ತಿಯಾದ ಕಾರಣ ಅಕೆಯ ಬಾಷೆ ಅರ್ಥ ಮಾಡಿಕೊಳ್ಳುವ ಸಂಜ್ಞ ಹಾಗೂ ಸಾಂಕೇತ ಬಾಷಾ ತಜ್ಞರನ್ನು ಕರೆಯಿಸದೇ, ಅವರ ಬಾಷೆಯನ್ನು ಯಾವ ರೀತಿ ಅರ್ಥ ಮಾಡಿಕೊಂಡು ನಿಡಿ-2 ದಾಖಲೆಯನ್ನು ತಯಾರಿಸಿರುತ್ತಾರೆ ಎನ್ನುವ ಬಗ್ಗೆ ಪ್ರಮಾಣ ಪತ್ರ ಇರುವುದಿಲ್ಲ ಆದ್ದರಿಂದ ಆ ರೀತಿಯಾಗಿ ನಿಡಿ-2 ತಯಾರಾಗಿಲ್ಲ ಎಂದರೆ ಸಾಕ್ಷಿಯು 35 ವರ್ಷಗಳು ಆಗಿದೆ ಆದ್ದರಿಂದ ನನಗೆ ಅದರ ಬಗ್ಗೆ ಗೊತ್ತಿಲ್ಲ. ಆದ ಕಾರಣ ಸಾಂಕೇತ ಭಾಷಾ ತಜ್ಞರನ್ನು ಉಪಯೋಗಿಸಿಕೊಳ್ಳದೇ ತಯಾರಾದ ದಾಖಲೆಯಲ್ಲ ಎಂದರೆ ಸಾಕ್ಷಿಯು 35 ವರ್ಷ ಗಳು ಆಗಿರುವುದರಿಂದ ಅದರ ಬಗ್ಗೆ ನನಗೆ ಗೊತ್ತಿಲ್ಲ.

31. ನಿಡಿ-2 ದಾಖಲೆಯಾದ ಎಷ್ಟು ವರ್ಷಗಳ ನಂತರ ಮೂಕಮ್ಮ ತೀರಿಕೊಂಡಳು ಎಂದರೆ ನಾನು ಮರೆತಿದ್ದೇನೆ.

32. ನಿಡಿ-2 ಆಗುವ ಸಮಯದಲ್ಲಿ ಆಕೆ ಏನು ಕಾಯಿಲೆಯಿಂದ ಬಳಲುತ್ತಿದ್ದಳು ಎಂದರೆ ಸಾಕ್ಷಿಯು ಏನು ಕಾಯಿಲೆ ಇಲ್ಲ. ಸಾಕ್ಷಿಯು ಮುಂದುವರೆದು ಆಕೆಯ ತಮ್ಮ ನನ್ನ ತಂದೆಯನ್ನು ಕರೆದುಕೊಂಡು ಹೋಗಿ ವಿಲ್ ಮಾಡುತ್ತೇನೆ ಎಂದು ಮಾಡಿಸಿರುತ್ತಾಳೆ ಎಂದು ನುಡಿಯುತ್ತಾರೆ.

33. ಆ ದಿನ ಅಂದರೆ ದಿ:01.04.1991 ರಂದು ಮೂಕಮ್ಮ ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಡವಾಗಿದ್ದರು ಎಂದು ಯಾವುದಾದರು ವೈದ್ಯರ ಬಳಿ ಪ್ರಮಾಣ ಪತ್ರ ಪಡೆದು ವಿಲ್ ಜೊತೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಆಕೆ ಆರೋಗ್ಯವಾಗಿದ್ದಳು ಆದ್ದರಿಂದ ಆರೋಗ್ಯ ತಪಾಸಣೆ ಮಾಡಿಸಿಲ್ಲ ಹಾಗೂ ಆರೋಗ್ಯ ಪ್ರಮಾಣ ಪತ್ರವನ್ನು ಮಾಡಿಸಿಲ್ಲ.

34. ಮೂಕಮ್ಮ ನಿಗೆ ಯಾವುದೇ ಆರೋಗ್ಯ ಪ್ರಮಾಣ ಪತ್ರ ಮಾಡಿಸದೆ, ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಡರಾಗಿದ್ದಾರೆ ಎಂದು ಪ್ರಮಾಣ ಪತ್ರವನ್ನು ಪಡೆಯದೇ ಕಾನೂನು ಬಾಹಿರವಾಗಿ ನಿಡಿ-2 ನ್ನು ನನ್ನ ತಂದೆ ತಯಾರಿಸಿರುವುದು ಎಂದರೆ ಸಾಕ್ಷಿಯು ಎಂದರೆ ಸರಿಯಲ್ಲ. ನನಗೆ ಅದರ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

35. ಈ ದಾವೆಯ ವ್ಯಾಜ್ಯ ಕಾರಣದ ಮೇಲೆ ಹಿಂದೆ ನನ್ನ ಮೇಲೆ ಯಾವುದಾದರೂ ಈ ಕೇಸ್ ನ ವಾದಿಗಳು ದಾವೆ ಹಾಕಿದ್ದರೇ ಎಂದರೆ ಇಲ್ಲ. ಈ ಹಿಂದೆ ಯಾವುದೇ ದಾವೆಯಲ್ಲಿ ನನ್ನ ಮೇಲೆ ಆಸ್ತಿ ಮಾರಾಟ ಮಾಡಬಾರದು ಎಂದು ನಿರ್ಬಂಧ

ಆದೇಶ ಯಾವುದೇ ಇರಲಿಲ್ಲ.



36. ದಿಃ05-06-2018 ರಂದು ಈ ದಾವೆಯನ್ನು ವಾದಿ ನನ್ನ ಮೇಲೆ ಹಾಕಿದ್ದರ ಬಗ್ಗೆ ಮಾಹಿತಿ ನನಗೆ ಇತ್ತೆ ಅಥವಾ ಇಲ್ಲ ಎಂದರೆ ಸಾಕ್ಷಿಯು ಗೊತ್ತಿತ್ತು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ